ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿನ ಏತ ನೀರಾವರಿ ಕಾಮಗಾರಿಗಳು

3 (17) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿನ, ವಿತರಣಾ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿನ ಕೊನೆಯ ಭಾಗದ ಜಮೀನಿಗೆ ನೀರಿನ ಕೊರತೆಯ ಸಮಸ್ಯೆ ನೀಗಿಸಲು ಏತ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು? (ಪ್ರತಿ ವಿಧಾನ ಸಭಾ ಕ್ಷೇತ್ರದ ಪ್ರತ್ಯೇಕ ವಿವರ ನೀಡುವುದು)

ಇ) ಈ ಏತ ನೀರಾವರಿಯ ಕಾಮಗಾರಿಗಳು, ಪ್ರಾರಂಭವಾಗಿ ಸುಮಾರು ಹತ್ತು ವರ್ಷಗಳು ಕಳೆದರೂ ಪೂರ್ಣಗೊಳ್ಳದೇ ಇರಲು ಇರುವ ಅಡೆತಡೆಗಳೇನು?

ಈ) ಯಾವಾಗ ಈಕಾಮಗಾರಿಗಳು ಸಂಪೂರ್ಣಗೊಳ್ಳುತ್ತವೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ ನೀ ಇ 144 ಎಂಎಂಕೆ 91 ದಿ: 25-4-94ರಲ್ಲಿ ವಿ.ಸಿ. ನಾಲೆಯ ಕೊನೆಯ ಹಂತದ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾಗಿ ನೀರನ್ನು ಒದಗಿಸುವ ಸಲುವಾಗಿ 17 ಏತ ನೀರಾವರಿ ಯೋಜನೆಗಳ ಮೂಲಕ 7208 ಎಕರೆ ಪ್ರದೇಶಕ್ಕೆ ನೀರು ಒದಗಿಸಲು ರೂ. 593.45 ಲಕ್ಷ ಮೊತ್ತದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. (ವಿವರಗಳನ್ನು ಲಗತ್ತಿಸಲಾಗಿದೆ ಅನುಬಂಧ-1)

ಇ) 17 ಏತ ನೀರಾವರಿ ಯೋಜನೆಗಳ ಪೈಕಿ ಹೆಮ್ಮನಹಳ್ಳಿ ಏತ ನೀರಾವರಿ ಯೋಜನೆಯನ್ನು ಹೊರತುಪಡಿಸಿ ಉಳಿದ 16 ಯೋಜನೆಗಳನ್ನು ಮೊದಲಿಗೆ ಇಲಾಖಾ ವತಿಯಿಂದ ತೆಗೆದುಕೊಳ್ಳಲಾಯಿತು. ಆದರೆ ನವೆಂಬರ್ 94ರಲ್ಲಿ ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯ ಪ್ರಕಾರ ಇಲಾಖೆ ವತಿಯಿಂದ ಕೈಗೊಂಡ ಈ ಕಾಮಗಾರಿಗಳನ್ನು ಡಿಸೆಂಬರ್ 94ರಲ್ಲಿ ಸ್ಥಗಿತಗೊಳಿಸಲಾಯಿತು. ನಂತರ 1996ರಲ್ಲಿ ಸದರಿ 16 ಕಾಮಗಾರಿಗಳನ್ನು ಟನ್‌ಕಿ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಟೆಂಡರ್ ಕರೆಯಲಾಯಿತು. ಆದರೆ ಈ ಕೆಲಸಗಳಿಗೆ ಗುತ್ತಿಗೆದಾರರು ಹೆಚ್ಚಿನ ಟೆಂಡರ್ ಪ್ರೀಮಿಯಂ ಸೂಚಿಸಿದ್ದರಿಂದ ಟೆಂಡರ್‌ಗಳನ್ನು ರದ್ದುಪಡಿಸಲಾಗಿದ್ದು, ಈ ಏತ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ಸಿವಿಲ್, ಪಂಪ್ ಮತ್ತು ಮೆಷನರಿ ಎಂದು ಬೇರ್ಪಡಿಸಿ, 9-96ರಲ್ಲಿ ಟೆಂಡರ್ ಕರೆಯಲಾಯಿತು. 97ರ ಆಗಸ್ಟ್ ತಿಂಗಳಿನಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಯಿತು. ಈ ಯೋಜನೆಗಳಲ್ಲಿ 1) ಹೆಮ್ಮನಹಳ್ಳಿ 2) ಕಿರಂಗೂರು 3) ಕಾಗೇಹಳ್ಳದದೊಡ್ಡಿ 4) ಯತ್ತಗದಹಳ್ಳಿ ಏ.ನೀ.ಯೋ. ಕಾಮಗಾರಿಗಳನ್ನು ಹೊರತುಪಡಿಸಿ

ಉಳಿದ 13 ಕಾಮಗಾರಿಗೆ ಬೇಕಾಗಿರುವ ಆರ್.ಸಿ.ಸಿ. ರೈಸಿಂಗ್ ಮೇನ್ ಪೈಪುಗಳು ಸರಬರಾಜಾಗದ ಕಾರಣ, ಈ ಪೈಪುಗಳ ಪೂರೈಕೆಗಾಗಿ ಫೆಬ್ರವರಿ 2000ರಲ್ಲಿ ಟೆಂಡರ್ ಕರೆಯಲಾಗಿದೆ.

ಯತ್ತಗದಹಳ್ಳಿ ಏತ ನೀರಾವರಿ ಯೋಜನೆಯ ಪಂಪ್‌ಹೌಸ್‌ಗೆ ಬೇಕಾಗಿದ್ದ ಜಮೀನಿನ ಭೂಸ್ವಾಧೀನವು 9-2002ರಲ್ಲಿ ಆಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು ಡಿಸೆಂಬರ್ 2004ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಹೆಮ್ಮನಹಳ್ಳಿ ಡಿಸೆಂಬರ್ 2003ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕಿರಂಗೂರು ಏ.ನೀ.ಯೋ.ಗೆ ಭೂ ಸ್ವಾಧೀನದ ಬಗ್ಗೆ 4 (1) ಅಧಿಸೂಚನೆಯ ಪ್ರಕ್ರಿಯೆ ನಡೆಯುತ್ತಿದ್ದು ಭೂಸ್ವಾಧೀನ ಪಡೆದುಕೊಂಡು ಕಾಮಗಾರಿಯನ್ನು ಡಿಸೆಂಬರ್ 2004ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಕಾಗೇಹಳ್ಳದ ದೊಡ್ಡಿ ಏ.ನೀ.ಯೋ.ಗೆ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ 4 (1) ಅಧಿಸೂಚನೆಯ ಪ್ರಕ್ರಿಯೆ ಮುಗಿದ್ದು 6 (1) ಅಧಿಸೂಚನೆ ಪ್ರಕ್ರಿಯೆಯ ನಂತರ ಭೂಸ್ವಾಧೀನ ಪಡೆದುಕೊಂಡು, ಕಾಮಗಾರಿಯನ್ನು ಡಿಸೆಂಬರ್ 2004ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಈ) ಅನುಬಂದ-1ರಲ್ಲಿ ನಮೂದಿಸಿರುವಂತೆ 6 ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ. ಕೋಣನಹಳ್ಳಿ, ಮೂಡ್ಯ, ತಗ್ಗಹಳ್ಳಿ, ಮರಿಲಿಂಗನ್‌ದೊಡ್ಡಿ, ಕೀಲಾರ ಮತ್ತು ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆ ಯೋಜನೆಗಳನ್ನು ಜೂನ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಹೆಮ್ಮನಹಳ್ಳಿ, ಕನ್ನಲಿ, ಹುಚ್ಚಲಗೆರೆ ಯೋಜನೆಗಳನ್ನು 12-2003ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಉಳಿದ 3 ಯೋಜನೆಗಳಾದ ಕಿರಂಗೂರು, ಯತ್ತಗಡಹಳ್ಳಿ ಮತ್ತು ಕಾಗೇಹಳ್ಳದ ದೊಡ್ಡಿ ಯೋಜನೆಗಳ ಭೂಸ್ವಾಧೀನದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಆತ್ಮಾನಂದ ಎಂ.ಎಸ್. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 17ಕ್ಕೆ ಅನುಬಂಧ-1

ಕ್ರ. ಸ.	ಏ.ನೀಯೋ. ಹೆಸರು	ವಿಧಾನ ಸಭಾ ಕ್ಷೇತ್ರ	ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ	1994-95ನೇ ಸಾಲಿನ ದರಗಳ ಪ್ರಕಾರ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇತ್ತೀಚಿನ ಹಂತ	ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ
1.	ಯಡವನಹಳ್ಳಿ	ಮದ್ದೂರು	215	22.00		ಕಾಮಗಾರಿ ಪೂರ್ಣಗೊಂಡಿದೆ
2.	ಬೆಕ್ಕಳಲೆ	ಮದ್ದೂರು	205	21.45		ಪರೀಕ್ಷಾರ್ಥ ಚಾಲನೆ ಮಾಡಬೇಕಿದೆ
3.	ಕಿರಂಗೂರು	ಮದ್ದೂರು	400	22.00	ಭೂಸ್ವಾಧೀನದ ಬಗ್ಗೆ 4(1) ಅಧಿಸೂಚನೆಯ ಪ್ರಕ್ರಿಯೆ ನಡೆಯುತ್ತಿದೆ.	ಡಿಸೆಂಬರ್ 2004
4.	ಹಳೇಹಳ್ಳಿ	ಮದ್ದೂರು	125	14.30		ಕಾಮಗಾರಿ ಪೂರ್ಣಗೊಂಡಿದೆ. ಪರೀಕ್ಷಾರ್ಥ ಚಾಲನೆ ಮಾಡಬೇಕಿದೆ.
5.	ಮೂಡ್ಯ	ಮದ್ದೂರು	200	17.60	ಸಿವಿಲ್ ಕಾಮಗಾರಿಗಳಲ್ಲಿ ಪಂಪ್‌ಹೌಸ್, ಶೇಖರಣಾ ತೊಟ್ಟಿ ಪೂರ್ಣಗೊಂಡಿದೆ. ಇನ್‌ಟೇಕ್ ಮತ್ತು ಜಾಕ್‌ವೆಲ್ ಪ್ರಾರಂಭಿಸಬೇಕಾಗಿದೆ. ಪಂಪ್ ಮತ್ತು ಯಂತ್ರೋಪಕರಣಗಳು ಸರಬರಾಜು ಆಗಿದ್ದು ಅಳವಡಿಸಬೇಕಾಗಿದೆ.	ಜೂನ್ - 2003

ಕ್ರ. ಸ.	ಏ.ನಿಯೋ. ಹೆಸರು	ವಿಧಾನ ಸಭಾ ಕ್ಷೇತ್ರ	ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ	1994-95ನೇ ಸಾಲಿನ ದರಗಳ ಪ್ರಕಾರ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇತ್ತೀಚಿನ ಹಂತ	ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ
6.	ತಗ್ಗಹಳ್ಳಿ	ಮದ್ದೂರು	335	24.20	ಸಿವಿಲ್ ಕಾಮಗಾರಿ ಪ್ರಗತಿಯಲ್ಲಿದ್ದು ಪಂಪ್ ಮತ್ತು ಯಂತ್ರೋಪಕರಣಗಳು ಸರಬರಾಜಾಗಿದ್ದು, ಅಳವಡಿಸಬೇಕಾಗಿದೆ.	ಜೂನ್ - 2003
7.	ಬೂದುಗುಪ್ಪೆ	ಮದ್ದೂರು	350	44.00	--	ಕಾಮಗಾರಿಯು ಪೂರ್ಣಗೊಂಡಿದ್ದು, ಪರೀಕ್ಷಾರ್ಥ ಚಾಲನೆಯಾಗಿರುತ್ತದೆ.
8.	ಕೆ. ಕೋಡಿಹಳ್ಳಿ	ಮದ್ದೂರು	550	59.50	--	ಕಾಮಗಾರಿಯು ಪೂರ್ಣಗೊಂಡಿದ್ದು, ಪರೀಕ್ಷಾರ್ಥ ಚಾಲನೆಯಾಗಿರುತ್ತದೆ.
9.	ಹೆಮ್ಮನಹಳ್ಳಿ	ಮದ್ದೂರು	340	29.70	ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು ಕಾಮಗಾರಿ ಪ್ರಾರಂಭಿಸಲಾಗಿಲ್ಲ	ಡಿಸೆಂಬರ್ - 2003
10.	ಚಿಕ್ಕರಸಿನಕೆರೆ	ಕಿರುಗಾವಲು	1450	132.00	ಪಂಪ್‌ಹೌಸ್, ಜಾಕ್‌ವೆಲ್, ಇನ್‌ಟೇಕ್ ವೆಲ್ ಮತ್ತು ಡೆಲಿವರಿ ಸಿಸ್ಟನ್ ಕಾಮಗಾರಿ ಮುಗಿದಿದೆ. ಏರು ಕೊಳವೆ ಕಾಮಗಾರಿ ಪ್ರಗತಿಯಲ್ಲಿದೆ.	ಜೂನ್ - 2003

ಕ್ರ. ಸ.	ಏ.ನಿಯೋ. ಹೆಸರು	ವಿಧಾನ ಸಭಾ ಕ್ಷೇತ್ರ	ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ	1994-95ನೇ ಸಾಲಿನ ದರಗಳ ಪ್ರಕಾರ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇತ್ತೀಚಿನ ಹಂತ	ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ
11.	ಕಾಗೇಹಳ್ಳದೊಡ್ಡಿ	ಮಂಡ್ಯ	700	41.80	ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 4(1) ಅಧಿಸೂಚನೆಯ ಪ್ರಕ್ರಿಯೆ ಮುಗಿದಿದ್ದು 6(1) ಅಧಿಸೂಚನೆ ಆಗಬೇಕಾಗಿರುತ್ತದೆ.	ಡಿಸೆಂಬರ್ - 2004
12.	ಕನ್ನಲಿ	ಮಂಡ್ಯ	300	33.00	ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಪಂಪ್ ಮತ್ತು ಯಂತ್ರೋಪಕರಣಗಳ ಸರಬರಾಜಾಗಬೇಕಾಗಿದೆ.	ಡಿಸೆಂಬರ್ - 2003
13.	ಹುಚ್ಚಲಗೆರೆ	ಮಂಡ್ಯ	300	33.00	-"-	ಡಿಸೆಂಬರ್ - 2003
14.	ಕೋಣನಹಳ್ಳಿ	ಮಂಡ್ಯ	288	22.00	ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಏರು ಕೊಳವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪಂಪ್ ಮತ್ತು ಯಂತ್ರೋಪಕರಣಗಳು ಸರಬರಾಜಾಗಿದ್ದು, ಅಳವಡಿಸಬೇಕಾಗಿದೆ.	ಜೂನ್ - 2003
15.	ಯತ್ತಗದಹಳ್ಳಿ	ಮಂಡ್ಯ	250	22.00	ಯೋಜನೆಯ ಪಂಪ್‌ಹೌಸ್‌ಗೆ ಬೇಕಾಗಿದ್ದ ಭೂಸ್ವಾಧೀನವು 9-2-2002ರಲ್ಲಿ ಆಗಿರುತ್ತದೆ.	ಜೂನ್ - 2004

ಕ್ರ. ಸ.	ಏ.ನಿಯೋ. ಹೆಸರು	ವಿಧಾನ ಸಭಾ ಕ್ಷೇತ್ರ	ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ	1994-95ನೇ ಸಾಲಿನ ದರಗಳ ಪ್ರಕಾರ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇತ್ತೀಚಿನ ಹಂತ	ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ
16.	ಮರಿಲಿಂಗನ ದೊಡ್ಡಿ	ಮಂಡ್ಯ	450	33.00	ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಏರು ಕೊಳವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪಂಪ್ ಮತ್ತು ಯಂತ್ರೋಪಕರಣಗಳು ಸರಬರಾಜಾಗಿದ್ದು, ಅಳವಡಿಸಬೇಕಾಗಿದೆ.	ಜೂನ್ - 2003
17.	ಕೀಲಾರ	ಕೆರಗೋಡು	800	22.00	-"-	ಜೂನ್ - 2003